ಥೂ... ಎಲ್ಲಿದ್ದೆ, ಎಲ್ಲಿಗೆ ಬಂದೆ? ಎಂದು ತನ್ನನ್ನೆ ನಿಂದಿಸಿಕೊಂಡ.

ಈಗ ಹೊರಗೆ ಹೋದರೂ ಯಾರೂ ಗುರುತಿಸಲಾರರು. ಹಿಂದೆಲ್ಲಾ ನಡೆಯುವುದಿರಲಿ ಕಾರಿನಲ್ಲಿ ಕುಳಿತು ಹೋದರೂ ಜನರಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಹಾಗಿತ್ತು ಸಿನಿಮಾ ನಟನೆಯಿಂದ ದಕ್ಕಿದ್ದ ಜನಪ್ರಿಯತೆ! ನಾಲ್ಕು ದಿನ ಕಣ್ಮರೆಯಾದರೆ ಮರೆತುಬಿಡುವ ಈ ಜನ ಕಳೆದ ಹತ್ತಾರು ವರ್ಷಗಳಿಂದ ತೆರೆಯ ಮರೆಗೆ ಸರಿದಿರುವ ತನ್ನನ್ನು ಅದು ಹೇಗೆ ನೆನಪಿಸಿಕೊಳ್ಳಬಲ್ಲರು ಎಂದುಕೊಳ್ಳುತ್ತಾ ಶೇವಿಂಗ್ ಮಾಡಿಕೊಳ್ಳಲು ಹೋದ. ಬಾಯಲ್ಲಿ ಹಲ್ಲುಸೆಟ್ಟಿಲ್ಲದಿದ್ದರೆ ಗುಳಿಬಿದ್ದ ಕೆನ್ನೆಯನ್ನು ಸರಿಯಾಗಿ ಶೇವ್ ಮಾಡಿಕೊಳ್ಳಲೂ ಸಾಧ್ಯವಿಲ್ಲ ಎನ್ನಿಸಿ ಬಿಸಿನೀರಲ್ಲಿ ನೆನೆಸಿದ್ದ ಹಲ್ಲುಸೆಟ್ಟನ್ನು ತೆಗೆದು ಬ್ರಶ್ಶಿನಿಂದ ತಿಕ್ಕಿ ಬಾಯಿಗೆ ಹಾಕಿಕೊಂಡು ಶೇವಿಂಗ್ ಮುಗಿಸಿಕೊಂಡ.

ಭಾನುವಾರಗಳಂದು ಒಬ್ಬಂಟಿತನದಿಂದ ಹೊರಬರಲು ಅವನು ಸುತ್ತಾಡಲು ಹೊರಡುತ್ತಾನೆ. ನಡೆದೇ ಹೋಗುತ್ತಾನೆ. ವಿಗ್ ಇಲ್ಲದ, ಬಾಯಲ್ಲಿ ಹಲ್ಲಿಲ್ಲದ, ಮೇಕಪ್ಪಿಲ್ಲದ ಅವನನ್ನು ಯಾರೂ ಗುರುತುಹಿಡಿಯಲಾರರು. ಅವನು 'ಒಂದುಕಾಲದ ಜನಪ್ರಿಯ ಸಿನಿಮಾ ನಟ' ಎಂದು ಯಾರಾದರೂ ಪರಿಚಯ ಮಾಡಿಕೊಟ್ಟರೂ ನಂಬುವುದು ಕಷ್ಟ! ಸಿನಿಮಾ ಬದುಕಿಗೆಂದು ಅವನಿಗಿಟ್ಟಿದ್ದ ಆಕರ್ಷಕ ಹೆಸರಾಗಲಿ, ಬಿರುದಾಗಲಿ ಈಗ ಚಲಾವಣೆಯಲ್ಲಿಲ್ಲ. ಹಾಗಾಗಿ ಅವನೀಗ ಕೇವಲ ಕೇವಲ ಒಬ್ಬ ವೃದ್ಧ ಮಾತ್ರ.

ಹೀಗೆ ರಾಜರಸ್ತೆಯ ಪಕ್ಕದ ಜನನಿಬಿಡ ಕಾಲುಹಾದಿಯಲ್ಲಿ ನಡೆದು ಹೋಗುವಾಗ ರಸ್ತೆಯ ಪಕ್ಕದ ಥಿಯೇಟರ್‌ನಲ್ಲಿ ನಿಲ್ಲಿಸಿರುವ ನಟರುಗಳ ಮುಗಿಲೆತ್ತರದ ಕಟೌಟ್ ನೋಡುವಾಗ ತನ್ನ ದಿನಗಳ ನೆನಪಿಗೆ ಜಾರಿಕೊಳ್ಳುತ್ತಾನೆ. ತನ್ನ ಕಟೌಟಿಗೆ ಹೂವಿನ ಮಾಲೆಗಳು, ನಕ್ಷತ್ರಗಳು, ಸಿನಿಮಾ ಬಿಡುಗಡೆಯ ದಿನ ಕ್ಷೀರಾಭಿಷೇಕ... ಹೊಸ ಹುಡುಗರು ಹೀರೋಗಳಾಗಿ ಬರುತ್ತಿದ್ದಂತೆ ಪ್ರೇಕ್ಷಕರೆಲ್ಲ ಅತ್ತ ತಿರುಗಿದರು. ಹೊಸ ಹೀರೊಗಳೆಲ್ಲ ಒಳ್ಳೆಯ ಎತ್ತರ, ಆಕರ್ಷಕ ನಿಲುವು, ಚಿಕ್ಕವಯಸ್ಸಿನಿಂದಲೆ ಸಿನಿಮಾ ಸೇರುವ ಗುರಿಯಿಂದಲೆ ಬೆಳೆಸಿದ ಸೊಗಸಾದ ಮೈಕಟ್ಟು, ಹೊಟ್ಟೆಯಲ್ಲಿ ಸಿಕ್ಸ್ ಪ್ಯಾಕ್. ಜೊತೆಗೆ ಬೆಳೆದ ತಂತ್ರಜ್ಞಾನದ ಬೆಂಬಲ ಇವೆಲ್ಲ ಇರುವಾಗ ಈಗಿನ ನಟರಿಗೆ ಹೋಲಿಸಿದರೆ ಸಾಮಾನ್ಯ ಎತ್ತರದ ಆಸಾಮಿಯಾಗಿದ್ದ, ವ್ಯಾಯಾಮವೇ ಇಲ್ಲದೆ ಸುಖ ಜೀವನದ ಕಾರಣ ಅಡ್ಡಾದಿಡ್ಡಿ ಬೆಳೆದ ಹೊಟ್ಟೆಯ ತಾನು ಮಾರ್ಕೆಟ್ ಕಳೆದುಕೊಳ್ಳಬೇಕಾದುದು ಅನಿವಾರ್ಯವಾಗಿತ್ತು. ಆಮೇಲಿನದು ಅವಮಾನ, ಬಡತನ ಮತ್ತು ಅಜ್ಞಾತವಾಸ.

ತನ್ನ ಇತಿಹಾಸವನ್ನು ನೆನಪಿಸಿಕೊಳ್ಳುತ್ತಾ ಫುಟ್‌ಪಾತಿನಲ್ಲಿ ನಡೆದು ಹೋಗುತ್ತಿದ್ದ ಅವನು ಸರ್ಕಲ್ ಹತ್ತಿರ ಬಂದಾಗ ಆಚೆಗೆ ದಾಟಲು ಪಾದಚಾರಿ ಸಿಗ್ನಲ್ ಲೈಟ್ ಹಸಿರಾಗುವುದನ್ನು ಕಾಯುತ್ತಾ ನಿಂತ. ಆ ಬದಿಯಲ್ಲಿ ನಿಂತವರನ್ನು ಸುಮ್ಮನೆ ಕುತೂಹಲಕ್ಕೆ ನೋಡುವಾಗ ಅಲ್ಲೊಬ್ಬಳು ಮಧ್ಯವಯಸ್ಸಿನ ಹೆಂಗಸು ಗಮನ ಸೆಳೆದಳು. ಎಲ್ಲೋ ನೋಡಿದಂತಿದೆ ಎನ್ನಿಸಿ ಮತ್ತೂ ನೋಡಿದ. ತನ್ನನ್ನು ಯಾರೋ ಗಂಡಸು ನೋಡುತ್ತಿದ್ದಾನೆ ಎಂಬುದನ್ನು ಗಮನಿಸಿದ ಆಕೆಯೂ ನೋಡುತ್ತಿದ್ದವನನ್ನು ತೀಕ್ಷ್ಣವಾಗಿ ನೋಡತೊಡಗಿದಳು.

ತನ್ನ ಯೌವನದ ದಿನಗಳಲ್ಲಿ 'ಪಿಕಪ್' ಎಂದು ಖ್ಯಾತಳಾಗಿ ಗುರುತಿಸಿಕೊಳ್ಳುತ್ತಿದ್ದ ಅವಳಿಗೆ ಪುರುಷರ ಇಂತಹ ದೃಷ್ಟಿಗಳು ಬೇಗನೆ ಇಂದ್ರಿಯಗ್ರಾಹ್ಯವಾಗಿಬಿಡುತ್ತಿದ್ದವು. ಜನಜಂಗುಳಿಯೊಳಗಿನಿಂದ ಒಬ್ಬ ಗಂಡಸು ದಿಟ್ಟಿಸುತ್ತಿದ್ದರೆ ಅವನ ಮನಸ್ಸಿನೊಳಗಿನ ಆಲೋಚನಾ ಸರಣಿಯನ್ನು ಯಥಾವತ್ತಾಗಿ ಅರ್ಥೈಸಿಕೊಳ್ಳುವಷ್ಟು ಚಾಲಾಕಿತನವನ್ನು ಅವಳ ವೃತ್ತಿ ಕಲಿಸಿತ್ತು. ಅವಳ ವೃತ್ತಿಯಲ್ಲಿ ಅವಳಾಗಲೇ ಯುವಕರನ್ನು ಆಕರ್ಷಿಸುವ ವಯಸ್ಸು ದಾಟಿದ್ದಳು. ಏನಿದ್ದರೂ ಮಧ್ಯವಯಸ್ಕರು ಮತ್ತು ವೃದ್ಧರೆ ಅವಳ ಅನ್ನದಾತರು. ಯಾರಾದರೂ ಅವಳನ್ನು ದಿಟ್ಟಿಸಿದರೆ ಅವರ ಮುಂದಿನ ನಡೆಯೇನು